ಶ್ರೀ ಜೆ. ಹೆಚ್. ಪಟೇಲ್.—ಯಾವುದೇ ಒಂದು ಸಂಸ್ಥೆಯ ದಕ್ಷತೆಯನ್ನು ಹೆಚ್ಚಿಸುವ ಬಗ್ಗೆ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ. ಆದರೆ ಮಾನ್ಯ ಸದಸ್ಯರಿಗೆ ಇಷ್ಟೇ ಹೇಳುತ್ತೇನೆ. ಈಗ ವಿದ್ಯುಚ್ಛಕ್ತಿ ಮಂಡಳಿಯ ಕೆಲವು ಕೆಲಸಗಳಲ್ಲಿ ದೋಷ ಇರಬಹುದು. ಇಲ್ಲವೆಂದು ನಾನು ಹೇಳುವುದಿಲ್ಲ. ಅಲ್ಲಿ ಎಲ್ಲ ಸರಿಯಾಗಿದೆ ಎಂದು ನಾನು ಹೇಳುವುದಿಲ್ಲ. ಆದರೆ ಅವರು ಮಾಡಿರುವಂತಹ ಕೆಲಸದ ಬಗ್ಗೆ ನೋಡಿದರೆ ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ. ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಕೌಂಟೆಂಟ್ ಇರಂಥ ಕಡೆ ಇಂಜಿನಿಯರ್ ಇದ್ದರೆ, ಇಂಜಿನಿಯರ್ ಅವರು ಇರುವ ಕಡೆ ಅಕೌಂಟೆಂಟ್ ಇದ್ದರೆ ಅದನ್ನು ಸರಿಪಡಿಸುವುದು ಸೂಕ್ತವಾಗಿದೆ. ಇದನ್ನೆಲ್ಲಾ ಸರಿಪಡಿಸಲು ಅಲ್ಲಿಗೆ ನಾವು ಹೊಸ ಅಧ್ಯಕ್ಷರನ್ನು ನೇಮಕ ಮಾಡುತ್ತೇವೆ. ಆದರೆ ಯಾರೂ ಎಂದು ಈಗ ಹೆಸರು ಹೇಳುವುದು ಸರಿಯಲ್ಲ.

ಶಿಕಾರಿಪುರ ತಾಲ್ಲೂಕ್ ಗಾಂಧಿನಗರದ ವಿದ್ಯುದ್ದೀಕರಣದ ಬಗ್ಗೆ

೩೦೬೮. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಕಾರಿಪುರ ತಾಲ್ಲೂಕು ಗಾಂಧಿನಗರಕ್ಕೆ ವಿದ್ಯುದ್ದೀಕರಣ ಮಾಡಲಾಗಿದೆಯೇ

ಆ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣವೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಗಾಂಧಿನಗರದ ವಿದ್ಯುದ್ದೀಕರಣ ಕಾರ್ಯ ಮುಗಿದಿದೆ. ವಿದ್ಯುತ್ ಪರಿವೀಕ್ಷಕರಿಂದ ಪರೀಕ್ಷಿಸಬೇಕಾಗಿದೆ. ಅವರಿಗೆ ಪತ್ರ ಬರೆಯಲಾಗಿದೆ. ಅವರ ಅನುಮತಿ ಪಡೆದ ಕೂಡಲೇ ಗಾಂಧಿನಗರಕ್ಕೆ ವಿದ್ಯುತ್ ಸರಬರಾಜು ಮಾಡಲಾಗುವುದು.

ಆ) 'ಅ' ಉತ್ತರದಿಂದ ಉದ್ಭವಿಸುವುದಿಲ್ಲ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಶಿಷ್ಟನೇ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಶಿಷ್ಟನೇ ಪಟ್ಟಿಯ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಮಂಗಳೂರು ಅನಿಲ ಟರ್ಬೈನ್ ವಿದ್ಯುತ್ ಘಟಕ

೪೦೭೯. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರದ ಮುಂದೆ ಒಟ್ಟು ಎಷ್ಟು ವಿದ್ಯುತ್ ಯೋಜನೆಗಳಿವೆ? ಅವು ಯಾವುವು ಹಾಗೂ ಯಾವ ಸ್ಥಳಗಳಲ್ಲಿ ಪ್ರಾರಂಭಿಸಲಾಗುವುದು, ಅವುಗಳ ಯೋಜನಾ ವಿವರ ಹಾಗೂ ಅಂದಾಜಿಸಲಾದ ವೆಚ್ಚವೆಷ್ಟು?

ಆ) ಅವುಗಳನ್ನು ಯಾವಾಗ ಪ್ರಾರಂಭಿಸಲಾಗುತ್ತದೆ?

ಇ) ಉದ್ದೇಶಿತ ಮಂಗಳೂರು ಅನಿಲ ಟರ್ಬೈನ್ ವಿದ್ಯುತ್ ಘಟಕದ ಯೋಜನೆ ಹಂತದಲ್ಲಿದೆ ಹಾಗೂ ಎಂದು ಪ್ರಾರಂಭವಾಗುತ್ತದೆ?

ಶ್ರೀ ಜೆ.ಹೆಚ್. ಪಟೇಲ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).— ಅ) ವಿದ್ಯುತ್ ಯೋಜನೆಗಳು ಕರ್ನಾಟಕ ರಾಜ್ಯದಲ್ಲಿ ಆರು ನಿರ್ಮಾಣ ಹಂತದಲ್ಲಿರುವ ಯೋಜನೆಗಳು ಹಾಗೂ ಐದು ನಿರ್ಮಾಣಕ್ಕೆ ಯೋಜಿಸಿರುವ ಯೋಜನೆಗಳಿವೆ. ಅವುಗಳ ವಿವರಗಳು ಈ ರೀತಿ ಇವೆ.

ನಿರ್ಮಾಣ ಹಂತದಲ್ಲಿರುವ ಯೋಜನೆಗಳು.

ಕ್ರಮ ಸಂಖ್ಯೆ	ಯೋಜನೆ ಹೆಸರು	ಒಟ್ಟು ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ)	ವಾರ್ಷಿಕ ವಿದ್ಯುತ್ ಉತ್ಪಾದನೆ (ದಶಲಕ್ಷ ಯೂನಿಟ್)	ಅಂದಾಜಿಸಲಾದ ವೆಚ್ಚ (ಕೋಟಿ. ರೂ.)
೧	ಕಾಳಿ ವಿದ್ಯುಚ್ಛಕ್ತಿ ಅಭಿವೃದ್ಧಿ ಹಂತ-೨			
	ಅ) ಕೊಡಸಳ್ಳಿ ಅಣ್ಣೆಕಟ್ಟು ವಿದ್ಯುದಾಗಾರ	೧೨೦	೧೦೮೦	೩೧೭
	ಆ) ಕದ್ರಾ ಅಣೆಕಟ್ಟು ವಿದ್ಯುದಾಗಾರ	೧೫೦		
೨.	ವರಾಹಿ ಜಲ ವಿದ್ಯುತ್ ಯೋಜನೆ			
	ಅ) ಭೂಗರ್ಭ ವಿದ್ಯುದಾಗಾರ	೩೩೦	೧೧೮೦	೨೨೦
	ಆ) ಮಾಣಿ ಅಣೆಕಟ್ಟು ವಿದ್ಯುದಾಗಾರ	೯		
೩.	ಗೇರುಸೊಪ್ಪ (ಶರಾವತಿ ಟೇಲ್‌ರೇಸ್) ಯೋಜನೆ	೨೪೦	೬೦೦	೨೧೨
೪.	ಘಟಪ್ರಭಾ ಅಣೆಕಟ್ಟು ವಿದ್ಯುದಾಗಾರ	೩೨	೧೩೧	೨೯.೫೩
೫.	ರಾಯಚೂರು ಶಾಖೋತ್ಪನ್ನ ವಿದ್ಯುದಾಗಾರ ವಿಸ್ತರಣೆ ಘಟಕ-೩	೨೧೦	೧೧೫೦	೨೦೫
೬	ಸಣ್ಣ ವಿದ್ಯುತ್ ಯೋಜನೆಗಳು:			
	ವಲ್ಲಾಪುರ ಸಿರವಾರ, ಗಣೇಕಲ್ ಕಲ್ಮಲಯೋಜನೆಗಳು	೧೦.೭೫	೬೦	೨೫.೫೬

ಕ್ರಮ ಸಂಖ್ಯೆ	ಯೋಜನೆಯ ಹೆಸರು	ಒಟ್ಟು ಸ್ಥಾಪಿತ ಸಾಮರ್ಥ್ಯ (ಮೆ.ವ್ಯಾ.)	ವಾರ್ಷಿಕ ವಿದ್ಯುತ್ ಉತ್ಪಾದನೆ (ದಶಲಕ್ಷ ಯೂನಿಟ್)	ಅಂದಾಜಿಸಲಾದ ವೆಚ್ಚ (ಕೋಟಿ ರೂ
೧.	ಮಹಾದಾಯಿ ಯೋಜನೆ:			
	ಅ) ಕೊಟ್ನಿ ಅಣೆಕಟ್ಟು ವಿದ್ಯುದಾಗಾರ	೨೦		
	ಆ) ಕೃಷ್ಣಾಪುರ ಭೂಗರ್ಭವಿದ್ಯುದಾಗಾರ	೨೬೦	೯೨೫	೨೫೬.೪೫
	ಇ) ಟೇಲ್‌ರೇಸ್ ಅಣೆಕಟ್ಟು ವಿದ್ಯುದಾಗಾರ	೨೫		
೨.	ಶಿವನಸಮುದ್ರಂ ಕಾಲಿಕ ಯೋಜನೆ	೨೭೦	೧೫೯೦	೧೨೯.೫೦
೩.	ರಾಯಚೂರು ಶಾಖೋತ್ಪನ್ನ ವಿದ್ಯುದಾಗಾರ ಘಟಕ-೪	೨೧೦	೧೧೫೦	೩೦೫.೧೮
೪.	ಮಂಗಳೂರು ಶಾಖೋತ್ಪನ್ನ ವಿದ್ಯುದಾಗಾರ	೪೨೦	೨೩೦೦	೬೨೧.೪೦
೫.	ಡೀಸೆಲ್ ಸೆಟ್ ವಿದ್ಯುದಾಗಾರಗಳು	೬೭.೭೬	೪೧೯	೫೦.೮೦

ಆ) ನಿರ್ಮಾಣಕ್ಕೆ ಯೋಜಿಸಿರುವ ಯೋಜನೆಗಳಲ್ಲಿ ರಾಯಚೂರು ಶಾಖೋತ್ಪನ್ನ ವಿದ್ಯುದಾಗಾರ ನಾಲ್ಕನೇ ಘಟಕದ ಯೋಜನೆಯ ಕೆಲಸಗಳನ್ನು ಈ ವರ್ಷ ಪ್ರಾರಂಭಿಸಲಾಗುವುದಂ, ಉಳಿದ ಯೋಜನೆಗಳನ್ನು ಕೇಂದ್ರ ಸರ್ಕಾರದ ಅನುಮೋದನೆ ಪಡೆದ ಮೇಲೆ ಹಾಗೂ ಹಣದ ಪೂರೈಕೆ ಮೇರೆಗೆ ಈ ಯೋಜನೆಗಳನ್ನು ಪ್ರಾರಂಭಿಸಲಾಗುವುದು.

ಇ) ಮಂಗಳೂರು ಶಾಖೋತ್ಪನ್ನ ಕೇಂದ್ರದ ಯೋಜನಾ ವರದಿಯನ್ನು ಸೆಂಟ್ರಲ್ ಎಲೆಕ್ಟ್ರಿಸಿಟಿ ಅಥಾರಿಟಿ (ಸಿಇಎ) ಪರಿಶೀಲಿಸಿ, ಈ ಯೋಜನೆಯ ಅನುಮೋದನೆಯನ್ನು ಕೆಲವು ಷರತ್ತುಗಳನ್ನು ಪೂರೈಸಿದ ಮೇಲೆ ಕೊಡಲಾಗುವುದೆಂದು ತಿಳಿಸಿದ್ದಾರೆ. ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ, ರೈಲು ಹಾಗೂ ನೌಕಾಯಾನ ಇಲಾಖೆ, ಕಲ್ಲಿದ್ದಲು ಇಲಾಖೆ ಮತ್ತು ಇತರ ಕೇಂದ್ರ ಸರ್ಕಾರದ ಇಲಾಖೆಗಳಿಂದ ಬೇಕಾದ ಅನುಮೋದನೆಗಳು ದೊರೆತ ಮೇಲೆ ಹಾಗೂ ಹಣದ ಪೂರೈಕೆ ಮೇರೆಗೆ ಈ ಯೋಜನೆಯನ್ನು ಆರಂಭಿಸಲಾಗುವುದು.

ಡೀಸಲ್ ವಿದ್ಯುತ್ ಉತ್ಪಾದನಾ ಘಟಕದ ಬಗ್ಗೆ.

೪೦೩೨. ಶ್ರೀ ಬಿ. ಎ. ಉಪ್ಪಾರಬ್ಬ(ವಿಟ್ಲ).—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ಸಮೀಪ ಯಲಹಂಕದಲ್ಲಿ ಸ್ಥಾಪಿಸಲು ಯೋಜಿಸಲಾಗಿರುವ ಡೀಸೆಲ್ ವಿದ್ಯುತ್ ಉತ್ಪಾದನಾ ಘಟಕಕ್ಕೆ ತಗಲುವ ವೆಚ್ಚವೆಷ್ಟು ?

ಆ) ಈ ಮೊತ್ತವನ್ನು ಯಾವ ಯಾವ ಮೂಲದಿಂದ ಒದಗಿಸಲಾಗುತ್ತದೆ ?

ಇ) ಈ ಯೋಜನೆ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರ್ಣಗೊಳ್ಳಲಿದೆ ?

ಶ್ರೀ ಜೆ. ಹೆಚ್. ಪಟೇಲ್(ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು) —

ಅ) ಅಂದಾಜು ವೆಚ್ಚ ರೂ. ೧೨೨.೦೦ ಕೋಟಿ ರೂ. ಗಳು.

ಆ) ೧. ಸುಮಾರು ೩೦ ಕೋಟಿ ರೂಪಾಯಿಗಳನ್ನು ಈ ಯೋಜನೆಯಲ್ಲಿ ಭಾಗವಹಿಸುವ ಕೈಗಾರಿಕೆಗಳಿಂದಲೂ